# ದಸರೆಯಲ್ಲಿ ಮೆರೆಯುವ ಕಲಾಪರಂಪರೆ

ಸಮಕಾಲೀನ ರಾಜಕೀಯ– ಸಾಮಾಜಿಕ ವ್ಯವಸ್ಥೆಯೊಳಗೆ ಬೆಳೆಯುವುದು ಕಲೆ ಮತ್ತು ಸಾಹಿತ್ಯಕ್ಕೆ ಯಾವ ಕಾಲಕ್ಕೂ ಅನಿವಾರ್ಯ. ನಿರಂತರ ಯುದ್ಧಗಳ ನಡುವೆ ಅವುಗಳನ್ನು ಪೋಷಿಸುವುದು ರಾಜಕೀಯ ವ್ಯವಸ್ಥೆಯ ಕರ್ತವ್ಯ. ಶತಮಾನಗಳಿಂದಲೂ ಕಲೆ ಸಾಹಿತ್ಯಗಳು ಗುರುಮನೆಗಳಲ್ಲಿ ಅರಳಿ ಅರಮನೆಗಳಲ್ಲಿ ಬೆಳಗುವುದು ನಮ್ಮ ನಾಡಿನ ಸಾಂಸ್ಕೃತಿಕ ಪರಂಪರೆಯ ವೈಶಿಷ್ಟ್ಯ. ವರ್ಷದ ಬಹುಪಾಲು ಕಾಲ, ಆಸ್ಥಾನಗಳಲ್ಲಿ ಪಂಡಿತರ, ಬಲ್ಲಿದರ ಆಸ್ವಾದಕ್ಕೇ ಮೀಸಲಿರುವ ಕಲೆಗಳು, ಹಬ್ಬಗಳ ನೆಪದಲ್ಲಿ ಪಾಮರರ, ಸಾಮಾನ್ಯರ ಬಳಿಗೆ ಬರುತ್ತವೆ. ಮನೆಯೊಳಗಿನ ಹಬ್ಬಗಳೆಲ್ಲ ಸಾರ್ವಜನಿಕ ಸಾಂಸ್ಕೃತಿಕ ಉತ್ಸವಗಳಾಗಿ ಮಾರ್ಪಡುವುದೇ ಆ ಕಾಲದ ಒಂದು ಸಂಭ್ರಮ!

ಮೈಸೂರು ಒಡೆಯರ ಅರಮನೆಯು ದಸರಾ ಉತ್ಸವಗಳ ಮೂಲಕ ಬೆಳೆಸಿದ ಸಾಂಸ್ಕೃತಿಕ ಪರಂಪರೆ ಹಲವು ದೃಷ್ಟಿಗಳಿಂದ ಅಮೂಲ್ಯ. ಅವು ನಮ್ಮ ಜನರ ಕಲಾಸಕ್ತಿಯನ್ನು ಶ್ರೀಮಂತವಾಗಿಸಿದೆ. ಸಂಗೀತ, ನೃತ್ಯ, ರಂಗಭೂಮಿ ಮತ್ತು ಚಿತ್ರಕಲೆಯಲ್ಲಿ ಶ್ರೇಷ್ಠವಾದುದು ಏನಿದೆಯೋ ಅದನ್ನು ಸಾಮಾನ್ಯ ಜನರ ರಸಾಸ್ವಾದನೆಗೂ ಒದಗಿಸುವ ಸಂದರ್ಭವಾಗಿ ದಸರಾ ಉತ್ಸವ ಬೆಳೆದಿದೆ. ಕನ್ನಡ ನಾಡಿನ ಕಲಾವಿದರು ಮಾತ್ರವಲ್ಲದೆ ನೆರೆಹೊರೆಯ ಪ್ರದೇಶಗಳ ಕಲಾವಿದರು ಕೂಡ ಇವುಗಳಲ್ಲಿ ಪಾಲ್ಗೊಂಡು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ. ಕಿರಿಯ ಕಲಾವಿದರ ಪಾಲಿಗೆ ದಸರಾ ಉತ್ಸವಗಳೇ ಅವರ ಕಲಿಕೆಯ ಘಟಿಕೋತ್ಸವಗಳಾಗಿ ಮಾರ್ಪಟ್ಟಿವೆ. ಮೈಸೂರು ಸಾಂಸ್ಕೃತಿಕ ಪರಂಪರೆಯ ವೈಶಿಷ್ಟ್ಯಗಳನ್ನು ಕಲಾವಿಮರ್ಶಕ ಮೈಸೂರು ವಿ. ಸುಬ್ರಹ್ಮಣ್ಯ ಅವರ ಲೇಖನ ಮಾಲೆಯ ಮೂಲಕ 'ಮಯೂರ' ಸಾಂಕೇತಿಕವಾಗಿ ನೆನಪಿಸಿಕೊಂಡಿದೆ.

ಶ್ರೀರಾಮನವಮಿ, ಗಣೇಶ ಚತುರ್ಥಿ, ಶ್ರೀಕೃಷ್ಣಾಷ್ಟಮಿ, ನವರಾತ್ರಿ ಮುಂತಾದ ಹಬ್ಬಗಳ ಹೆಸರಿನಲ್ಲಿ ನಡೆಯುವ ಸಂಗೀತ– ನೃತ್ಯ ಉತ್ಸವಗಳು ತಲೆಮಾರುಗಳ ಕಲಾಭಿರುಚಿಯನ್ನು, ರಸಗ್ರಹಣ ಶಕ್ತಿಯನ್ನು ರೂಪಿಸುವ ಅದ್ಭುತ ಕೆಲಸವನ್ನು ಮಾಡಿವೆ. ರಾಜರ ಕಾಲ ಮುಗಿದು ಪ್ರಜಾತಂತ್ರ ವ್ಯವಸ್ಥೆ ಬಂದ ನಂತರವಂತೂ ಈ ಉತ್ಸವಗಳ ವಿಸ್ತಾರ ಮತ್ತು ಪ್ರಭಾವ ಹೆಚ್ಚುತ್ತಿದೆ. ಸಂಸ್ಕೃತಿಯೂ ಮಾರುಕಟ್ಟೆಯ ಸರಕಾಗಿ, ಉತ್ಸವಗಳು ಒಂದು 'ಸಾಂಸ್ಕೃತಿಕ ಉದ್ಯಮ'ವಾಗಿ ಬೆಳೆಯುತ್ತಿವೆ. 'ಯೂ ಟ್ಯೂಬ್' ಸೇರಿ ಅತ್ಯಾಧುನಿಕ ಪರಿಕರಗಳ ನೆರವಿನಿಂದ ಬೇಕಾದ ಸಂಗೀತವನ್ನು ಬೇಕಾದ ಹೊತ್ತಿನಲ್ಲಿ ಕೇಳುವ ಸೌಲಭ್ಯವಿರುವ ಈ ಸಮಯದಲ್ಲಿ ಕೂಡ, ರಸಿಕಸಮೂಹದ ನಡುವೆ ಕುಳಿತು ಸಂಗೀತ ಮತ್ತು ನೃತ್ಯವನ್ನು ಆಸ್ವಾದಿಸುವ ಅನುಭವ ಯುವಜನರಿಗೂ ಇಷ್ಟವಾಗುತ್ತಿರುವುದೇ ನಮ್ಮ ಕಾಲದ ವಿಶೇಷ.



–ಆರ್. ಪೂರ್ಣಿಮಾ